ಆಪತ್ತಿಗೇಂತ ಇಟ್ಕೊಂಡ ಕಾಸನ್ನು ಗುಟ್ಟಾಗಿ ಅವನ ಕೈಯಲ್ಲಿಟ್ಟು, 'ಬೆಣ್ಣೆದೋಸೆ ತಿನ್ನು' ಎಂದು ಅವನ ತಲೆ ಸವರುತ್ತಿದ್ದಳು. ಅವನೂ, 'ಮುಂದಕ್ಕೆ ನಿಮ್ಮನ್ನ ಹೂವಿನಂಗೆ ನೋಡ್ಕೋತೀನವ್ವ. ಇಷ್ಟು ದಿನಾ ಗೇಯ್ದಿದ್ದು ಸಾಕು. ಕೂತು ಉಣ್ಣೀವ್ರಂತೆ' ಎಂದಾಗ ಅವಳ ಮನಸು ಹೂವಾಗಿ ಕನಸುಗಳು ಗೊನೆ ಬಿಟ್ಟು ಆಲದ ಮರವೇರಿ ನಿಲ್ಲುತ್ತಿದ್ದವು.

ಗಾರೆ ಕೆಲಸಕ್ಕೆ ಹೋಗಿ ಬಂದ ನಂಜುಂಡ ಮತ್ತು ದೇವಪ್ಪ ತಲಾ ಐನೂರು ರೂಪಾಯಿಗಳನ್ನು ಕೈಯಲ್ಲಿ ಹಿಡಿದುಕೊಂಡು ಸೋಜಪ್ಪನ ಮನೆಯ ಬಳಿ ಹೊರಟರು. ದಾರಿಯಲ್ಲಿ ಸಿಕ್ಕಿದ್ದು ಕಾಮತ್ ಮಾಮ. ಇಡೀ ಹಳ್ಳಿಗೆಲ್ಲಾ ಅವರೊಬ್ಬರೇ ಡಾಕ್ಟ್ರು. ಅವರು ಅದೇನು ಪಾಸು ಮಾಡಿಕೊಂಡಿದ್ರೋ.. ಆದರೆ ಅಲೋಪತಿ ಡಾಕ್ಟ್ರಂತೂ ಅಲ್ಲ. ಅವರ ಅಪ್ಪಟ ಶಿಷ್ಯೆ ವಾರಿಜಕ್ಕ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದಳು. ರೋಗಿಗಳನ್ನು ಸಾಲಾಗಿ ತಪಾಸಣೆಗೆ ಕಳಿಸುವವಳೂ ಅವಳೇ. ನರ್ಸೂ ಅವಳೇ. ಬಾಟಲಿಯಲ್ಲಿ ಕೆಂಪು ಔಷಧಿ ತುಂಬಿಸಿ ಚೀಟಿ ಹಚ್ಚುತ್ತ, 'ದಿನಕ್ಕೆ ಮೂರು ಸಾರಿ ತಪ್ಪದೇ ತೊಗೊಬೇಕು'ಎಂದು ಹೇಳುವವಳೂ ಅವಳೇ. ನಂಜುಂಡ ಕೈಮುಗಿಯುತ್ತ, 'ನಮ್ಸ್ಕಾರ ಡಾಕ್ಟ್ರಿಗೆ. ವಾರಿಜಕ್ಕ ಸಿಕ್ಕಾಗ ನಿಮ್ ಬಗ್ಗೆ ಹೇಳ್ತಿದ್ಳು' ಎಂದ. ಅವರೂ, 'ಹ್ಞೂಂ.. ಅವಳಿಲ್ಲ ಇವತ್ತು. ಚರ್ಚಿಗೆ ಹೋಗ್ಬರ್ತೀನೀಂತ ಹೋಗಿದ್ದಾಳೆ'ಎಂದರು. ದೇವಪ್ಪ ಸುಮ್ಮನಿರಲಾರದೇ, 'ಡಾಕ್ಟ್ರೆ.. ವಾರಿಜಕ್ಕ ಚರ್ಚಿಗೆ ಹೋದ್ರೆ ನೀವು ಸುಮ್ಮನೆ ಇರ್ತೀರಾ? ಅವ್ರು ಧರ್ಮಕ್ಕೆ ಸೇರ್ಕಂಡ್ರೆ..?' ಎಂದು ಕೇಳಿದ. ಕಾಮತ್ ಮಾಮ ನಸುನಗುತ್ತ, 'ನನ್ನ ಕೈಲಂತೂ ಅವಳಿಗೆ ಬೇಕಾದಷ್ಟು ಸಹಾಯ ಮಾಡಕ್ಕೆ ಆಗೋದಿಲ್ಲ. ಯಾರಾದ್ರೂ ಮಾಡ್ತಾರಂದ್ರೆ.. ಅದರಿಂದ ಅವಳಿಗೆ ಒಳ್ಳೇದಾಗ್ತದಂದ್ರೆ ನಾನ್ಯಾಕೆ ಬೇಡಾ ಅನ್ಲಿ? ಹೋಗ್ಲಿ ಬಿಡು'ಎಂದರು. ಇಬ್ಬರಿಗೂ ಅದೇನೋ ಭರವಸೆ ದೊರೆತಂತಾಯ್ತು. ಅವರಿಗೆ ವಂದಿಸಿ ಚರ್ಚಿನ ಹಿಂದೆ ಇದ್ದ ಸೋಜಪ್ಪನ ಮನೆಯ ಮುಂದೆ ನಿಂತರು. ಸೋಜಪ್ಪ ಅವರನ್ನು ಒಳಗೆ ಕರೆದು ಕೂರಿಸಿ , 'ಇಂಥಾ ಅರ್ಜೆಂಟೇನಿರಲಿಲ್ಲ. ನಿಧಾನವಾಗೇ ಕೊಟ್ಟರಾಗೋದು' ಎಂದರು. ಇಬ್ಬರಿಗೂ ಅಚ್ಚರಿ. ಏಕೆಂದರೆ ಇಲ್ಲಿಯವರೆಗೆ ಸಾಲ ತಿರುಗಿ ಕೊಡುವಾಗ ಯಾರೂ ಹೀಗೆ ಹೇಳಿರಲಿಲ್ಲ. ಶೆಟ್ಟರಾಗಲೀ.. ಗೌಡರಗಲೀ..ಮೇಸ್ತ್ರಿಯಾಗಲೀ.. ಮೊದಲು ಬೈಗುಳ ಮಳೆಗರೆಯುತ್ತಿದ್ದರು. ಕೆಲವು ಬಾರಿ ಕೊಡುವಾಗ ಕೊಂಚ ತಡವಾದರೂ ಸಂಬಳದಲ್ಲಿ ಹಿಡಿದುಕೊಂಡು ಕೈಯಾಡಿಸಿಬಿಡುತ್ತಿದ್ದರು.

ಇವರೋ.. ಸರಾಗವಾಗಿ ಮಾತನಾಡುತ್ತ ಕೊನೆಗೆ 'ಸರಿಯಾಗಿ ತಿರುಗಿ ತಂದು ಕೊಟ್ಟಿದ್ದೀರಿ. ನಿಮ್ಮ ಪ್ರಾಮಾಣಿಕತೆಗೆ ಇದು ಬಕ್ಷೀಸು' ಎಂದು ಇಪ್ಪತ್ತು ರೂಪಾಯಿಗಳನ್ನು ಕೈಲಿಟ್ಟರು. ನಂಜುಂಡ 'ಬೇಡ' ಎನ್ನುವಷ್ಟರಲ್ಲಿ ದೇವಪ್ಪ ತೆಗೆದುಕೊಂಡಾಗಿತ್ತು. ಚರ್ಚಿನ ಒಳಗಡೆ ಕರೆದೊಯ್ದದ್ದಲ್ಲದೇ ಅಲ್ಲಿಂದಲೇ



ಹೊರಗೆ ದಾರಿ ತೋರಿಸಿದರು. ತಮಗೆ ದೊರೆತ ಗೌರವದ ಬಗ್ಗೆ ಇಬ್ಬರಿಗೂ ಸಂತೋಷವಾಗಿತ್ತು. ಆದರೂ ನಂಜುಂಡ ದೇವಪ್ಪನಿಗೆ, 'ಬಕ್ಷೀಸು ಯಾಕೆ ಈಸ್ಕೊಂಡೆ? ಬ್ಯಾಡ ಅನಬೋದಿತ್ತು'ಎಂದ. ದೇವಪ್ಪ, 'ಸುಮ್ಕಿರು ಕಣ್ಲಾ. ಇದು ಯಾರಿಗೂ ಗೊತ್ತಾಗಾಕಿಲ್ಲ. ಸಾರಾಯಿ ಕುಡ್ಕೊಂಡೇ ಹೋಗೋವಾ' ಎಂದು ಅವನ ಕೈ ಅದುಮಿದ.'ಹೇ.. ಬ್ಯಾಡಪ್ಪ'ಎಂದವನಿಗೆ ಮಾದೇವಿ ಮಗನ ಬಳಿ ದಾವಣಗೆರೆಗೆ ಹೋಗಿದ್ದು ನೆನಪಾಯಿತು. ಮೆತ್ತಗೆ ಅವನನ್ನು ಹಿಂಬಾಲಿಸಿದ.

ಕೆಲವೇ ದಿನಗಳಲ್ಲಿ ಮಾದೇವಿಗೆ ಜ್ವರ ಬಂತು. ಕಾಮತ್ ಮಾಮನ ಸೂಜಿಗೂ ಮಣಿಯಲಿಲ್ಲ. ನಾಲ್ಕೇ ದಿನಗಳಲ್ಲಿ ಅರ್ಧವಾದಳು ಮಾದೇವಿ.